# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 120 |
| 2 | ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 16-09-2021 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಗೊಂಡಿರುವ ಬೆಂಗಳೂರಿನ HBR ಬಡಾವಣೆಯ 2ನೇ ಬ್ಲಾಕ್ 1ನೇ ಹಂತದಲ್ಲಿ (ವಾರ್ಡ್ ನಂ-24 ಹಾದು ಹೋಗುವ ದೊಡ್ಡ ಮೋರಿಯ (ಕಾಲುವೆ) ಅಕ್ಕ-ಪಕ್ಕದಲ್ಲಿ ಕಸದ ರಾಶಿ ಹಾಕುತ್ತಿರುವುದರಿಂದ ಅಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿರುವುದಲ್ಲದೆ ಅದರಿಂದ ಉತ್ಪತ್ತಿಯಾಗುವ ಸೊಳ್ಳೆಗಳಿಂದ ಅಲ್ಲಿನ ಅನೇಕ ಜನರು ಅನಾರೋಗ್ಯಕ್ಕೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಗೊಂಡಿರುವ ಬೆಂಗಳೂರಿನ ಹೆಚ್‌ಬಿಆರ್ ಬಡಾವಣೆಯ 2ನೇ ಬ್ಲಾಕ್ 1ನೇ ಹಂತದಲ್ಲಿ (ವಾರ್ಡ್ ನಂ-24) ಹಾದು ಹೋಗುವ ದೊಡ್ಡ ಮೋರಿಯ (ಕಾಲುವೆ) ಜಾಗದಿಂದ ಪ್ರತಿ ನಿತ್ಯ ಬಿಬಿಎಂಪಿ ವತಿಯಿಂದ ಕಸ ತೆರವುಗೊಳಿಸಲಾಗುತ್ತಿದೆ. ಸದರಿ ದೊಡ್ಡ ಮೋರಿಯ (ಕಾಲುವೆ) ಅಕ್ಕ-ಪಕ್ಕದಲ್ಲಿ ವಾಸಿಸುವ ನಿವಾಸಿಗರ ಮನೆ ಮನೆಗಳಿಂದ ಕಸ ಸಂಗ್ರಹಣೆಗೆ ಆಟೋಗಳನ್ನು ಕಳುಹಿಸಲಾಗುತ್ತಿದೆ. ಮುಂದುವರೆದು, ಕಸ/ಘನ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡದಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಹಾಗೂ ಕಸ ಸಂಗ್ರಹಣೆಗೆ ಅನುಕೂಲವಾಗುವಂತೆ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪ್ರೋತ್ಸಾಹಿಸಲಾಗುತ್ತಿದೆ. |
| ಆ | ಸದರಿ ಬಡಾವಣೆಯ ಜನರು ಆರೋಗ್ಯದಿಂದ ಬದುಕುವಂತಾಗಲು ದೊಡ್ಡ ಮೋರಿ (ಕಾಲುವೆ) ಅಕ್ಕ-ಪಕ್ಕದಲ್ಲಿ ಕಸದ ರಾಶಿ ಹಾಕುತ್ತಿರುವುದನ್ನು ತಡೆದು ಮೋರಿಯಿಂದ ಸೊಳ್ಳೆಗಳು ಬರದಂತೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ? (ವಿವರ ಒದಗಿಸುವುದು) | |

ಸಂಖ್ಯೆ: ನಅಇ 218 ಎಂಎನ್‌ವೈ 2021 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ